ಸಂಗೀತಗಾರನಿಗಿರುವ ಕೃಶವಲ್ಲದ ಮೈಕಟ್ಟು, ಹಣೆಯ ಮೇಲೆ ತಿರುಪತಿ ನಾಮ, ಹೊಸ ಷರಟು, ಪಂಚೆ ತೊಟ್ಟಿದ್ದರು. ಹಸುಮಗುವಿನಂಥ ಮಾತು. ಆದರೆ ಅಷ್ಟೇನು ಅಗಾಧವಲ್ಲದ ಸಣ್ಣ ಆರೋಗ್ಯದ ಸಮಸ್ಯೆಯನ್ನೇ ದೊಡ್ಡದು ಎಂದು ಭಾವಿಸಿ ಸ್ವಲ್ಪ ಮಂಕಾಗಿದ್ದರು. ನಮ್ಮ ಮಾತುಕತೆಯ ನಡುವೆ ಅವರು ಹಾಡುವ ಜುಂಜಪ್ಪನ ಬಗ್ಗೆ ಮಾತು ಹೊರಳಿತು. ಜುಂಜಪ್ಪನ ಪದವನ್ನು ನಾಲ್ಕು ಸಂಧುಗಳಲ್ಲಿ ಹಾಡುವವರು ನಮ್ಮಲ್ಲಿ ಯಾರೂ ಇಲ್ರ, ನಾನು ನಾಲ್ಕು ಸಂಧುಗಳನ್ನೂ ಹಾಡಬಲ್ಲೆ ಎಂದು ಉಕ್ಕುವ ಆತ್ಮವಿಶ್ವಾಸದಿಂದ ಹೇಳಿದರು. ಹೌದು, ನಮ್ಮ ಅನುಭವದಲ್ಲಿ ಜುಂಜಪ್ಪನ ಪದವನ್ನು ಹಾಡುವರ ಪೈಕಿ ಉಳಿದಿರುವ ಕೆಲವೇ ಮಂದಿಯಲ್ಲಿ ಇವರು ಪ್ರಮುಖರು. ಯಾವ ಪ್ರಶಸ್ತಿ, ಪುರಸ್ಕಾರ, ಹಾರ-ತುರಾಯಿಗಳ ಬಗ್ಗೆ ಕಿಂಚಿತ್ತೂ ಗೊತ್ತಿಲ್ಲದ ಈ ಮುಗ್ಧ ಹಾಡುಗಾರ ಕಾಡುಗೊಲ್ಲ ಸಮುದಾಯದ ಸಜೀವ ಆಸ್ತಿ. ನಾನು ತಿಳಿದಂತೆ ಬೇವಿನಹಳ್ಳಿ ಜುಂಜಪ್ಪನ ಶ್ರದ್ಧಾ ಕೇಂದ್ರವಾಗಿ ಹೇಗೆ ಪ್ರಸಿದ್ಧವೋ, ಹಾಗೆಯೇ ಪದಗಾರ ತಿಮ್ಮಣ್ಣನೂ ಪ್ರಸಿದ್ಧ. ಮೂಡ್ಲು ಮಣೇವು ಮುಗಿದಮೇಲೆ ಉಂಬಕ್ಕೆ ನಮ್ಮ ಹಟ್ಟಿಗೇ ಬನ್ನಿ ಎಂದು ಆ ದಂಪತಿಗಳಿಬ್ಬರೂ ಕಟ್ಟಕ್ಕರದಿಂದ ಕರೆದರು. ಅವರಿಂದ ಬೀಳ್ಕೊಂಡು ಮತ್ತೆ ಜುಂಜಪ್ಪನ ಪೌಳಿಗೆ ಬಂದೆವು.

ಯುಗಾದಿ ಹಬ್ಬದ ದಿನದಂದು ಬೆಳಗ್ಗೆಯೇ ಕೈಯೆಣ್ಣೆ ಸ್ನಾನವನ್ನು ಮುಗಿಸಿದ ದಾಸಪ್ಪಗಳು ಮಡಿಯಿಂದ ಜಾಗಟೆ ಮತ್ತು ಬವನಾಸಿಯೊಂದಿಗೆ ಜುಂಜಪ್ಪನ ಪೌಳಿಗೆ ಬರುತ್ತಾರೆ. ಗುಡಿಯ ಮುಂದೆ ನಿಂತು ಜಾಗಟೆ ಬಾರಿಸಿ, ಗೋವಿಂದನನ್ನು ಕೂಗಿ ಜುಂಜಪ್ಪನಿಗೆ ಹಣ್ಣುಕಾಯಿ ಮಾಡಿಸಿ ತೆರಳುತ್ತಾರೆ. ಮತ್ತೆ ತಮ್ಮ ತಮ್ಮ ಮನೆಗಳಲ್ಲಿ ಜುಂಜಪ್ಪ ಮತ್ತು ತಿಮ್ಮಪ್ಪನಿಗೆ ಪೂಜೆ ಸಲ್ಲಿಸಿ, ನಂತರದಲ್ಲಿ ಹಟ್ಟಿಯ ಎಲ್ಲರ ಮನೆಗಳಿಗೂ ಉಲೇವಿಗೆ ತೆರಳುತ್ತಾರೆ. ಮನೆಗಳ ಮುಂದೆ ನಿಂತು ಜಾಗಟೆ ಬಾರಿಸಿ ಗೋವಿಂದನನ್ನು ಕೂಗುತ್ತಾರೆ. ಎಲ್ಲ ಮನೆಯ ಹೆಣ್ಣುಮಕ್ಕಳೂ ದಾಸರ ಕಾಲು ತೊಳೆದು, ಗರುಡಗಂಬಕ್ಕೆ ಎಣ್ಣೆ ಹೊಯ್ದು, ಅವರ ಬವನಾಸಿಗೆ ಪಡಿ ನೀಡುತ್ತಾರೆ. ಹೀಗೆ ಪ್ರತಿ ಮನೆಗೂ ಉಲೇವಿಗೆ ಹೋಗಲೇ ಬೇಕಿರುವುದರಿಂದ, ಹೆಣ್ಣುಮಕ್ಕಳು ಹಟ್ಟಿ ಬಾಗಿಲಲ್ಲೇ ಇವರಿಗೋಸ್ಕರ ಕಾಯುತ್ತಾ ನಿಂತಿದ್ದರು. ಯುಗಾದಿಯ ಉರಿಬಿಸಿಲಿಂದಾಗಿ ನನಗೆ ಬಾಯಾರತೊಡಗಿತು. ಗೋವಿಂದರಾಜು ಕೂಡ ವಿಪರೀತ ದಾಹ ಎಂದು ಆ ಕಡೆ ಈ ಕಡೆ ನೋಡುತ್ತಿದ್ದರು. ಅಷ್ಟರಲ್ಲಿ ಗೋವಿಂದರಾಜು ಅವರೇ ಒಂದು ಹಟ್ಟಿ ಬಾಗಿಲಲ್ಲಿ ನಿಂತು,‘ಅವ್ವಾ ನೀರು ಕೊಡರವ್ವ ಕುಡಿಯೋದಕ್ಕೆ, ವಿಪರೀತ ದಾಹ’ ಎಂದು ಹಟ್ಟಿ ಬಾಗಿಲಲ್ಲಿ ನಿಂತಿದ್ದ ಮಹಿಳೆಯೊಬ್ಬರನ್ನು ಕೇಳಿದರು. ಇಲ್ಲಕಣ್ಣಪ್ಪ, ಮಣೇವು ಮುಗಿಯೋವರೆಗೆ ನಾವು ಯಾರಿಗೂ ನೀರು ಕೊಡೋದಿಲ್ಲ! ನಾವೂ ನೀರು ಕುಡಿಯೋದಿಲ್ಲ! ಎಂದು ಅವರು ಹೇಳಿದರು. ನಮಗೆ ಈ ಸಂಗತಿ ಗೊತ್ತಿರಲಿಲ್ಲವಾದ್ದರಿಂದ ಕೇಳಿದೆವು. ಅಷ್ಟರಲ್ಲಿ ಪೂಜಾರ ಚಿತ್ತಯ್ಯನವರು ನಮ್ಮ ಹತ್ತಿರ ಬಂದು,‘ನಮ್ಮ ಹಟ್ಟಿಯಲ್ಲಿ ಹೀಂಗೆಯೇ ಇರೋದು. ಬನ್ನಿ ಇನ್ನೇನು ಮಣೇವು ಮುಗಿಸಿಕೊಂಡು ಬಂದುಬಿಡೋಣ’ ಎಂದರು.

ಉಲೇವು ತೀರಿದ ನಂತರ ಮಧ್ಯಾಹ್ನದ ಹೊತ್ತಿಗೆ ಬೇವಿನಹಳ್ಳಿಯ ಪ್ರಖ್ಯಾತ ಅರೆ ವಾದ್ಯ ಬಾರಿಸುವ ನರಸಿಂಹರಾಜು ಮತ್ತು ಅವರ ತಂಡದವರು ಮನೆ ಮನೆಗೂ ಹೋಗಿ ಕೆರೆಯಂಗಳಕ್ಕೆ ಫಲಾಹಾರ ತರುವವರನ್ನು ಜುಂಜಪ್ಪನ ಗುಡಿಯ ಮುಂದಕ್ಕೆ ಕರೆತಂದರು. ಹೀಗೆ ಫಲಾಹಾರ ಮತ್ತು ಕಳಸವನ್ನು ಹೊತ್ತು ಬರುವವರು ಪೂಜಾರಪ್ಪ ಮತ್ತು ದಾಸರ ನೇತೃತ್ವದಲ್ಲಿ ಕೆರೆಯಂಗಳಕ್ಕೆ ಮೆರವಣಿಗೆಯಲ್ಲಿ ಹೊರಟರು. ಹೆಚ್ಚು ಮನೆಗಳಿರುವುದರಿಂದ ಇಡೀ ಹಟ್ಟಿ ಮೂರು ಗುಂಪಾಗಿ ಕೆರೆಯಂಗಳಕ್ಕೆ ಬರುತ್ತದೆ. ಮಹಿಳೆಯರು, ಪುರುಷರು, ವಯಸ್ಸಾದವರು, ಆಡೋ ಮಕ್ಕಳು ಹೀಗೆ ವಿವಿಧ ವಯೋಮಾನದ ಹಟ್ಟಿಯವರೆಲ್ಲ ಬಂದು ಕೆರೆಯಂಗಳದಲ್ಲಿ ಕೂಡಿಕೊಂಡರೆ, ಇಡೀ ಕೆರೆಬಯಲು ಚಿಗುರಿದ ಹೊಲದಂತೆ ರಂಗಾಗಿ ಕಾಣುತ್ತದೆ. ಕೆರೆಯಂಗಳದಲ್ಲಿ ಪ್ರತಿಗುಂಪಿನಲ್ಲಿರುವ ಪೂಜಾರಪ್ಪ ಮತ್ತು ದಾಸರು ಮೂರು ಗುಂಪುಗಳು ಪ್ರತ್ಯೇಕವಾಗಿಯೇ ಕರಿಕಂಬಳಿಯ ಜಾಡಿಯನ್ನು ಮೂಡಲು ದಿಕ್ಕಿಗೆ ಮುಖಮಾಡಿ ಹಾಸಿದರು. ಜಾಡಿ ಹಾಸಿದ ಮೇಲೆ ಅಕ್ಕಿ ಸುರಿದು, ಅದರ ಮೇಲೆ ಮೂರು ಬಿದಿರಿನ ಬೆತ್ತಗಳಿಂದ ಬಿಲ್ಗೂಡು ಕಟ್ಟಿದರು. ಬಿಲ್ಲಗೂಡನ್ನು ಹೂವು, ಬ್ಯಾಟೆಸೊಪ್ಪು, ಮಾವಿನೆಲೆ